ದಿ: 28-02-2018 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಗ್ರಾಮೀಣ ಪುನರ್ವಸತಿ ಕಾರ್ಯಕರ್ತನಾಗಿ ತಿಳುವಳ್ಳಿ ಗ್ರಾಮದ ಪಂಚಾಯತಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಕಳೆದ ನಾಲ್ಕು ವರ್ಷಗಳಿದ ಕೆಲಸ ಮಾಡುತ್ತೇನೆ. ಗ್ರಾಮ ಪಂಚಾಯತಿಯಲ್ಲಿ ಗ್ರಾಮೀಣ ಪುನರ್ವಸತಿ ಕಾರ್ಯಕರ್ತ ಅನ್ನುವ ಹುದ್ದೆ ಇರುವುದಿಲ್ಲಾ ಅಂದ್ರೆ ಸರಿಯಲ್ಲ. ನಾನು ಬಸನಗೌಡ ಪುಟ್ಟನಗೌಡ ಹೊಸಮನಿ ಅನ್ನುವವರ ವಿರುದ್ದ ದಾವಾ ಸಲ್ಲಿಸಿದ್ದೇನೆ. ದಾವಾ ಆಸ್ತಿಯು ನಮ್ಮ ಪಿತ್ರಾರ್ಜಿತ ಆಸ್ತಿ ಎಂದು ದಾವಾ ಸಲ್ಲಿಸಿದ್ದೇನೆ. ದಾವಾ ಆಸ್ತಿಯ ವಿಪಿಸಿ ನಂ.46/1, 46/2 ಅಂತಾ ಇರುತ್ತದೆ. ವಿಪಿಸಿ ನಂ. 46/1 ರ ಪೂರ್ವ-ಪಶ್ಚಿಮ 12 ವರೆ ಅಡಿ ಉತ್ತರ-ದಕ್ಷಿಣ 30 ಅಡಿ, ಅದರಲ್ಲಿ ನಮ್ಮ ಭಾಗಕ್ಕೆ 30 ಅಡಿ ಬರುತ್ತದೆ. ವಿಪಿಸಿ ನಂ. 46/2 ಪೂರ್ವ-ಪಶ್ಚಿಮ 12 ವರೆ ಅಡಿ ಉತ್ತರ ದಕ್ಷಿಣ 30 ಅಡಿ ಇರುತ್ತದೆ. ದಾವಾ ಆಸ್ತಿ ಮೂಲತಃ ನಮ್ಮ ಅಜ್ಜನಿಂದ ಬಂದಿದೆ. ನನ್ನ ಅಜ್ಜ ಚನ್ನಬಗೌಡ ಅನ್ನುವವರಿಗೆ ದೊಡ್ಡ ಶಿವಲಿಂಗಪ್ಪ ಅನ್ನುವ ಮಗ ಇದ್ದಾನೆ ಅಂದ್ರೆ ನಿಜ. ಬಸನಗೌಡ ಅನ್ನುವ ಮಗ ಇದ್ದ ಅಂದ್ರೆ ಸಾಕ್ಷಿ ಅವರೇ ನಮ್ಮ ತಂದೆ ಇದ್ದಾರೆ ಅಂತಾ ಹೇಳುತ್ತಾರೆ. ಸಂಗಪ್ಪ ಗೌಡ ಅನ್ನುವ ಮಗ ಇದ್ದ ಅಂದ್ರೆ ನಿಜ. ದೊಡ್ಡ ಶಿವಲಿಂಗಪ್ಪ ಗೌಡನಿಗೆ ಮಲ್ಲಮ್ಮ ಅನ್ನುವ ಹೆಂಡತಿ ಇದ್ದಳು ಅಂದ್ರೆ ನಿಜ. ಅದೇ ರೀತಿ ಶೀಲವ್ವ ಅನ್ನುವ ಮಗಳು ಇದ್ದಾಳೆ ಅಂದ್ರೆ ನಿಜ.

ನನ್ನ ತಂದೆಯ ಸಹೋದರನಾದ ಸಂಗಪ್ಪಗೌಡನಿಗೆ ಬಸನಗೌಡ ಅನ್ನುವ ಮಗ ಇದ್ದಾನೆ ಅಂದ್ರೆ ನಿಜ. ಆತನೇ ಈ ದಾವಾದ 6 ನೇ ಪ್ರತಿವಾದಿ ಇದ್ದಾನೆ. 6 ನೇ ಪ್ರತಿವಾದಿಗೆ ಸರೋಜಾ, ಲಲಿತಾ, ಗೌರಮ್ಮ, ಶಾಂತವ್ವ ಮತ್ತು ನೀಲವ್ವ ಅನ್ನುವ ಸಹೋದರಿಯರು ಇದ್ದಾರೆ ಅಂದ್ರೆ ನಿಜ. ದಾವಾ ಆಸ್ತಿಯು ಅವರಿಗೂ ಸಹ ಪಿತ್ರಾರ್ಜಿತ ಆಸ್ತಿ ಅಂದ್ರೆ ನಿಜ. 6 ನೇ ಪ್ರತಿವಾದಿಯ ಸಹೋದರಿಯರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲಾ. ಈ ದಾವೆಯಲ್ಲಿ ಅವರನ್ನು ಸೇರ್ಪಡೆ ಮಾಡಲು ಕಾನೂನಿನ ತೊಂದರೆ ಇರಲಿಲ್ಲ ಅಂದ್ರೆ ಸಾಕ್ಷಿಯು ಈಗಾಗಲೇ ಆಸ್ತಿಯಲ್ಲಿ ಭಾಗ ಕೊಟ್ಟಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ

ಸೇರಿಸಿರವುದಿಲ್ಲಾ. ಅವರಿಗೆ ನಮ್ಮ ಕುಟುಂಬದ ಸರ್ವೆ ನಂ.91/ಕ ರಲ್ಲಿ 01 ಎಕರೆ ಸರ್ವೆ ನಂ.25 ರಲ್ಲಿ 01 ಎಕರೆ 25 ಗುಂಟೆ ಜಮೀನ್ನು ಮತ್ತು ಸರ್ವೆ ನಂ.73 ರಲ್ಲಿ 01 ಎಕರೆ 20 ಗುಂಟೆ ಜಮೀನನ್ನು ಕೊಟ್ಟಿದ್ದೇವೆ. 6 ನೇ ಪ್ರತಿವಾದಿಯ ಸಹೋದರಿಯರಿಗೆ ಎಷ್ಟೆಷ್ಟು ಜಮೀನು ಕೊಟ್ಟಿದ್ದೇವೆ ಅಂತಾ ನಿಖರವಾಗಿ ಹೇಳಲು ಬರುವುದಿಲ್ಲಾ. 6 ನೇ ಪ್ರತಿವಾದಿಯರ ಸಹೋದರಿಯರಿಗೆ ವಿಭಾಗ ಕೊಟ್ಟ ನಂತರ ಅವರು ಯಾವುದೇ ದಾಖಲೆಯನ್ನು ಮಾಡಿಸಿಕೊಂಡಿರುವುದಿಲ್ಲಾ. ನನ್ನ ಅಜ್ಜ ಚನ್ನಬಸನಗೌಡನಿಗೆ ಬಸವಣ್ಣೆಪ್ಪಗೌಡ ಅನ್ನುವ ಕಿರಿಯ ಸಹೋದರ ಇದ್ದ ಅಂದ್ರೆ ನಿಜ. ಅವರಿಗೆ ಶಿವಲಿಂಗಪ್ಪಗೌಡ ಅನ್ನುವ ಮಗ ಇದ್ದ ಅಂದ್ರೆ ನಿಜ. ಅವನು ಮೃತಪಟ್ಟಿದ್ದಾನೆ ಅಂದ್ರೆ ನಿಜ. ಮೃತ ಶಿವಲಿಂಗಪ್ಪಗೌಡನಿಗೆ (1) 5 ನೇ ಪ್ರತಿವಾದಿ (2) ರಾಮನಗೌಡ (3) ಹನುಮನಗೌಡ (4) ಸೋಮನಗೌಡ (5) ಗದಿಗೆಮ್ಮ ಮತ್ತು (6)ಸುಧಾ ಅನ್ನುವ ಮಕ್ಕಳಿದ್ದಾರೆ ಅಂದ್ರೆ ನಿಜ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿಲ್ಲಾ ಅಂದ್ರೆ ಸಾಕ್ಷಿಯ ದಾವಾ ಆಸ್ತಿಯಲ್ಲಿ 30 ಅಡಿ ಜಾಗೆಯನ್ನು ಕೊಟ್ಟಿದ್ದೇವೆ ಅಂತಾ ಹೇಳುತ್ತಾರೆ. (1) 5 ನೇ ಪ್ರತಿವಾದಿ (2) ರಾಮನಗೌಡ (3) ಹನುಮನಗೌಡ (4) ಸೋಮನಗೌಡ (5) ಗದಿಗೆಮ್ಮ ಮತ್ತು (6)ಸುಧಾ ಇವರೂ ಸಹ ಸಾಮೂಹಿಕ ಹಕ್ಕುದಾರರು ಅಂದ್ರೆ ನಿಜ. ಸಾಕ್ಷಿಯು ಈಗಾಗಲೇ ಅವರಿಗೆ ಈಗಾಗಲೇ ಭಾಗ ಕೊಡಲಾಗಿದೆ ಅಂತಾ ಹೇಳುತ್ತಾರೆ. ವಿಪಿಸಿ ನಂ.45/1 ರಲ್ಲಿ ಪೂರ್ವ ಪಶ್ಚಿಮ -12 ವರೆ ಅಡಿ ಉತ್ತರ ದಕ್ಷಿಣ 30 ಅಡಿ ಜಾಗೆಯನು ಈಗಾಗಲೇ ಕೊಟ್ಟಿದ್ದೇವೆ. ಆ ಬಗ್ಗೆ ನನ್ನಲ್ಲಿ ದಾಖಲೆಗಳು ಇವೆ.. ಆಬಗ್ಗೆ ನಾನು ನ್ಯಾಯಾಲಯದ ಮುಂದೆ ದಾಖಲೆಗಳನ್ನು ಹಾಜರು ಮಾಡಿಲ್ಲಾ.

ನನ್ನ ಅಜ್ಜ ಚನ್ನಬಸವನಗೌಡನಿಗೆ ಮತ್ತು ಆತನ ಸಹೋದರನ್ನೊಳಗೊಂಡು ಒಟ್ಟು 35 ಎಕರೆ ಜಮೀನು ಇತ್ತು. ನಮ್ಮ ಮನೆತನಕ್ಕೆ ಒಟ್ಟು ಐದು ವಿಪಿಸಿ ಆಸ್ತಿಗಳು ಇವೆ. ಅವುಗಳೆಂದರೆ, 45, 45/1, 46, 46/1, ಮತ್ತು 47 ಆಸ್ತಿಗಳು ಇವೆ. ಇವುಗಳನ್ನು ಹೊರತುಪಡಿಸಿ ಸಂಗಪ್ಪಗೌಡ ಎನ್ನುವವರಿಗೆ ನಾವು ಖರೀದಿ ಮಾಡಿದ ಆಸ್ತಿಯನ್ನು ಕೊಟ್ಟಿದ್ದೇವೆ. ಐದೂ ಆಸ್ತಿಗಳ ವಿಸ್ತೀರ್ಣ ಒಂದೇ ಸಮನಾಗಿರುವುದಿಲ್ಲ. ವಿಪಿಸಿ ನಂ.45 ರ ಒಟ್ಟು ವಿಸ್ತೀರ್ಣ ಉತ್ತರ ದಕ್ಷಿಣ 100 ಅಡಿ ಪೂರ್ವ-ಪಶ್ಚಿಮ 20 ಅಡಿ ಇರುತ್ತದೆ. ವಿಪಿಸಿ

ನಂ. 46 ರ ವಿಸ್ತೀರ್ಣ ಕೂಡ 45 ರದ್ದು ಇದೇ ಇರುತ್ತದೆ ಅಂದ್ರೆ ನಿಜ. ವಿಪಿಸಿ ನಂ.47 ರ ವಿಸ್ತೀರ್ಣ ಉತ್ತರ ದಕ್ಷಿಣ 100 ಅಡಿ ಪೂರ್ವ ಪಶ್ಚಿಮ 25 ಅಡಿ ಇರುತ್ತದೆ. ನಮ್ಮ ಕುಟುಂಬದ ಎಲ್ಲ ಆಸ್ತಿಗಳಲ್ಲಿ 1945 ರಲ್ಲಿಯೇ ವಿಭಾಗ ಮಾಡಿಕೊಂಡಿದ್ದೇವೆ. ಸದರಿ ವಿಭಾಗದ ಮೂಲಕ ಯಾರ್ಯಾರಿಗೆ ಎಷ್ಟೆಷ್ಟು ಭಾಗ ಹೋಗಿದೆ ಅಂತಾ ಹೇಳಲು ಬರುವುದಿಲ್ಲಾ. ಸದರಿ ವಿಭಾಗದ ಮೂಲಕ ನಮ್ಮ ತಂದೆಗೆ ವಿಪಿಸಿ ನಂ.46 ರಲ್ಲಿ ಬಂದಿದೆ ಅಂದ್ರೆ ನಿಜ. ಸಾಕ್ಷಿಯು ವಿಪಿಸಿ ನಂ.46 ಮತ್ತು 46/1 ಎರಡೂ ಆಸ್ತಿಗಳು ನಮ್ಮ ತಂದೆಗೆ ಬಂದಿವೆ. ವಿಪಿಸಿ ನಂ.46 ನ್ನು ಹೊರತುಪಡಿಸಿ ನಮಗೆ ಬೇರೆ ಜಾಗೆ ಬಂದಿರುವುದಿಲ್ಲಾ ಅಂದ್ರೆ ನಿಜ. ಅದೇ ರೀತಿ ವಿಪಿಸಿ ನಂ.45 ಮತ್ತು 45/1 ಇವುಗಳು 5 ನೇ ಪ್ರತಿವಾದಿಯ ಹಿಸ್ಸೆಗೆ ಹೋಗಿವೆ ಅಂದ್ರೆ ನಿಜ. ವಿಪಿಸಿ ನಂ.47 ಇದು 1 ರಿಂದ 4 ನೇ ಪ್ರತಿವಾದಿಯರ ಕುಟುಂಬಕ್ಕೆ ಹೋಗಿದೆ ಅಂದ್ರೆ ನಿಜ.

ದಾವೆಯನ್ನು ಸಲ್ಲಿಸಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ವಾದ ಪತ್ರದ ಖಂಡಿಕೆ-4 ರಲ್ಲಿ ನಮೂದಿಸಿದ ಪೂರ್ವ ಪಶ್ಚಿಮ 12 ವರೆ ಅಡಿ ಉತ್ತರ ದಕ್ಷಿಣ 60 ಅಡಿ ಇದು ವಿಪಿಸಿ ನಂ.46 ಕ್ಕೆ ಸಂಬಂಧಪಟ್ಟಂತೆ ಇದೆ. ವಿಪಿಸಿ ನಂ.46 ರಲ್ಲಿ ನಾವು ಮತ್ತು 5 ನೇ ಪ್ರತಿವಾದಿ ಸೇರಿ ಸಾಮೂಹಿಕ ವಹಿವಾಟು ಮಾಡುತ್ತೇವೆ. ನಾವು ಮತ್ತು 5 ನೇ ಪ್ರತಿವಾದಿ 1944 ರಲ್ಲಿ ವಿಭಾಗ ಮಾಡಿಕೊಂಡಿದ್ದೇವೆ. ವಿಪಿಸಿ ನಂ.46 ರಲ್ಲಿ ನಾವು ಮತ್ತು 5 ನೇ ಪ್ರತಿವಾದಿ ಸೇರಿ ಸಾಮೂಹಿಕ ವಹಿವಾಟು ಮಾಡುತ್ತೇವೆ ಅಂತಾ ತೋರಿಸಲು ಉತಾರದಲ್ಲಿ ನಮೂದಾಗಿದೆ. ನಾವು ವಿಭಾಗ ಆದ ಬಗ್ಗೆ ಯಾವುದೇ ನೊಂದಾಯಿತ ದಾಖಲೆ ಮಾಡಿಕೊಂಡಿರುವುದಿಲ್ಲಾ. ನಾನು ವಾದ ಪತ್ರದ ಖಂಡಿಕೆ-7 ರಲ್ಲಿ ವಿಪಿಸಿ ನಂ 46 ರ ಸಂಪೂರ್ಣ ಮಾಲಕ ಅಂತಾಹೇಳಿ ಬರೆಸಿದ್ದೇನೆ. ನಮ್ಮ ತಂದೆಯ ಸಹೋದರರಾದ ಮೃತ ಶಿವಲಿಂಗಪ್ಪಗೌಡ ಮತ್ತು ಮೃತ ಸಂಗಪ್ಪಗೌಡ ಇವರು ಅವರಿಗೆ ಬಂದಂತಹ ಜಾಗೆಯನ್ನು ನನಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ. ಆ ಬಗ್ಗೆ ನಮ್ಮ ಮನೆಯಲ್ಲಿ ದಾಖಲೆಗಳು ಇವೆ. ಅವುಗಳನ್ನು ಪಂಚರು ಬರೆದು ಸಹಿ ಮಾಡಿದ್ದಾರೆ. ಆ ಬಗ್ಗೆ ಪಂಚಾಯತಿಯಲ್ಲಿ ಠರಾವು ಆಗಿದೆ. ಆ ಠರಾವು ನಂಬರು ನನಗೆ ಗೊತ್ತಿಲ್ಲಾ. ನಮ್ಮ ತಂದೆಯ

ಸಹೋದರರರರು ನಮ್ಮ ತಂದೆಗೆ ಯಾವುದೇ ದಾವಾ ಆಸ್ತಿಯಲ್ಲಿ ಹಕ್ಕನ್ನು ಬಿಟ್ಟು ಕೊಟ್ಟಿಲ್ಲಾ ಅಂದ್ರೆ ಸರಿಯಲ್ಲ. ಅವರಿಗೂ ಭಾಗ ಇದೆ ಅಂದ್ರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು )

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್

ಸಾಕ್ಷಿದಾರರ ಸಹಿ